# ನೈತಿಕ ಫ್ಯಾಷನ್

'**P**lea for responsible consumption'

ಇಂಥದ್ದೊಂದು ಜಾಹೀರಾತು 90ರ ದಶಕದಲ್ಲಿ ಅಮೆರಿಕದ ಜನಪ್ರಿಯ ಮ್ಯಾಗಜಿನ್ 'ಯುಟಿಎನ್‌ಇ ರೀಡರ್'ನಲ್ಲಿ ಕಾಣಿಸಿಕೊಂಡಿತ್ತು. ದೊಡ್ಡಕ್ಷರಗಳಲ್ಲಿ ಮುದ್ರಿತವಾಗಿದ್ದ ಈ ಜಾಹೀರಾತುಗಳನ್ನು ನೋಡಿದ ಓದುಗರು ಭೂತದ ಬಾಯಿಯಲ್ಲಿ ಭಗವದ್ಗೀತೆ ಕೇಳಿದಷ್ಟೇ ಅಚ್ಚರಿಯಿಂದ ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದರು. ಗ್ರಾಹಕರನ್ನು ಓಲೈಸುವ ಜಾಹೀರಾತುಗಳೇ ತುಂಬಿರುತ್ತಿದ್ದ ಪತ್ರಿಕೆಯಲ್ಲಿ 'ಜವಾಬ್ದಾರಿಯಿಂದ ಖರೀದಿಸಲು ಮನವಿ' ಎಂಬ ಜಾಹೀರಾತು ಹೇಗೆ ಬಂತು ಎಂಬ ಪ್ರಶ್ನೆಯಷ್ಟೇ ಅವರ ಅಚ್ಚರಿಯ ಮೂಲ ಆಗಿರಲಿಲ್ಲ. 'ನಿಮಗೆ ಅಗತ್ಯವಿರುವಷ್ಟೇ ಬಟ್ಟೆಗಳನ್ನು ಕೊಳ್ಳಿ. ದುಂದುಗಾರಿಕೆಗೆ ಬಲಿಯಾಗಬೇಡಿ' ಎಂದು ಸಾರುವ ಇಡೀ ಪುಟದ ತುಂಬ ಮುದ್ರಿತಗೊಂಡಿದ್ದ ಜಾಹೀರಾತನ್ನು ನೀಡಿದ್ದು ಅಂದಿನ ಅತಿ ಜನಪ್ರಿಯ ವಸ್ತ್ರವ್ಯಾಪಾರಿ ಕಂಪನಿ ಎಸ್‌ಪ್ರಿಟ್!

ಬಟ್ಟೆ ಖರೀದಿಸಬೇಡಿ ಎಂದು ಜವಳಿ ಕಂಪನಿಯೇ ಜಾಹೀರಾತು ಕೊಟ್ಟರೆ ಅಚ್ಚರಿಯಾಗದೇ ಇರುತ್ತದೆಯೇ? 'ಇದು ಫಾಸ್ಟ್ ಫುಡ್ ರೆಸ್ಟೋರೆಂಟ್‌ನಲ್ಲಿ 'ಡಯಟ್ ಮಾಡಿರಿ' ಎಂದು ಬರೆದ ಹಾಗಿದೆ' ಎಂದು ಆಡಿಕೊಂಡವರೂ ಇದ್ದರು. ಇದು ಇಲ್ಲಿಗೇ ಮುಗಿಯಲಿಲ್ಲ. 'ನ್ಯೂಯಾರ್ಕ್ ಟೈಮ್ಸ್'ನಲ್ಲಿ ಇನ್ನೊಂದು ಇಷ್ಟೇ ವಿಲಕ್ಷಣ ಜಾಹೀರಾತು ಬಂತು. ಅದು ಈಗಲೂ ಬರುತ್ತಿದೆ. ವಸ್ತ್ರೋದ್ಯಮದ ಇನ್ನೊಂದು ಜನಪ್ರಿಯ ಕಂಪನಿ ಪೆಟಗೋನಿಯಾ ನೀಡಿದ ಆ ಜಾಹೀರಾತಿನಲ್ಲಿ ಒಂದು ಆಕರ್ಷಕ ಜಾಕೆಟ್‌ನ ಚಿತ್ರವಿತ್ತು. ಅದರ ಮೇಲೆ '**Don't buy this Jacket**' ಎಂಬ ಬರಹ!

ವಸ್ತ್ರ ವ್ಯಾಪಾರದ ಕಂಪನಿಗಳು ತಮ್ಮ ವ್ಯಾಪಾರಕ್ಕೇ ಅಡ್ಡಗಾಲಾಗುವ ಇಂಥ ಜಾಹೀರಾತನ್ನು ಯಾಕೆ ಕೊಡುತ್ತವೆ? ಇದರ ಹಿಂದೆಯೂ ವ್ಯಾಪಾರಿ ತಂತ್ರವೇ ಇರಬಹುದೇ? ಇಲ್ಲ. ಈ ಜಾಹೀರಾತಿನ ಹಿಂದಿರುವುದು ವ್ಯಾಪಾರಿ ತಂತ್ರವಲ್ಲ. ಅದು 'ಸಸ್ಟನೇಬಲ್ ಫ್ಯಾಷನ್' ಎಂಬ ಪರಿಕಲ್ಪನೆಗೆ ಎರಡು ದೈತ್ಯ ವಸ್ತ್ರ ವ್ಯಾಪಾರಿ ಕಂಪನಿಗಳು ತೋರಿಸಿರುವ ಬದ್ಧತೆ. ಈ ಜಾಹೀರಾತುಗಳಿಗೂ ಸಸ್ಟನೇಬಲ್ ಫ್ಯಾಷನ್‌ಗೂ ಏನು ಸಂಬಂಧ? ಸಸ್ಟನೇಬಲ್ ಫ್ಯಾಷನ್ ಅಂದರೆ ಏನು? ಅದು ಯಾಕೆ ಬೇಕು? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಗಬೇಕು ಎಂದರೆ ನಾವು ಇನ್ನೊಂದಿಷ್ಟು ವಿಸ್ತಾರ ಪೀಠಿಕೆಯನ್ನು ಹಾದುಬರಬೇಕು.

***

'ತುತ್ತು ಅನ್ನ ತಿನ್ನೋಕೆ/ ಬೊಗಸೆ ನೀರು ಕುಡಿಯೋಕೆ/ ತುಂಡು ಬಟ್ಟೆ ಸಾಕು ನನ್ನ ಮಾನ ಮುಚ್ಚೋಕೆ/ ಅಂಗೈ ಅಗಲ ಜಾಗ ಸಾಕು ಹಾಯಾಗಿರೋಕೆ'

'ಜಿಮ್ಮಿಗಲ್ಲು' ಚಿತ್ರದ ಈ ಹಾಡಿನ ಸಾಲುಗಳು ಮನುಷ್ಯನೊಬ್ಬನ ಸಹಜ, ಸರಳ, ಸುಖಮಯ ಬದುಕಿಗೆ ಏನೇನಿದ್ದರೆ ಸಾಕು ಎನ್ನುವುದನ್ನು ಹೇಳುತ್ತದೆ. ಜೊತೆಗೆ ಅದಕ್ಕೂ ಮೀರಿದ ಹಪಹಪಿತನ ಅಪಾಯ ಎನ್ನುವ ಮುನ್ಸೂಚನೆಯನ್ನೂ ಕಟ್ಟಿಕೊಡುತ್ತದೆ. ಈ ಸಿನಿಮಾ ಹಾಡಿನ ಕಗ್ಗವನ್ನೇ ಮಹಾತ್ಮ ಗಾಂಧೀಜಿ ಇನ್ನೊಂದು ಬಗೆಯಲ್ಲಿ ಹೇಳಿದ್ದರು: 'ಮನುಷ್ಯನ ಅಗತ್ಯವನ್ನು ಪೂರೈಸುವಷ್ಟು ಸಂಪನ್ಮೂಲ ಈ ಭೂಮಿಯಲ್ಲಿದೆಯೇ ಹೊರತು ಅವನ ದುರಾಸೆಯನ್ನಲ್ಲ.' ಗಾಂಧೀಜಿ ಅಂದು ಆಡಿದ ಮಾತು ಕಾರಣಿಕದ ಹಾಗೆಯೇ ಇಂದು ನಿಜವಾಗುತ್ತಿದೆ. ಕಾಂಚಾಣ ಕುಣಿತದ ಭೋಗಸಂಸ್ಕೃತಿಯ ನಯವಾದ ಹೆದ್ದಾರಿಯಲ್ಲಿ ಮಿತಿಮೀರಿದ ವೇಗದಲ್ಲಿ ಸಾಗುತ್ತಿರುವ ನಾವು ಗೊತ್ತಿಲ್ಲದೆಯೇ ವಿನಾಶದ ಪ್ರಪಾತದತ್ತ ಸಾಗುತ್ತಿದ್ದೇವೆ. ದಾರಿಯ ಮೋಹಕ್ಕೆ ಮೈಮರೆತು ಹೊರಟುಬಂದ ಮೂಲವನ್ನೂ, ತಲುಪಬೇಕಾದ ಗುರಿಯನ್ನೂ ಮರೆತ ಪರಿಣಾಮವಿದು. ಆಹಾರ, ಉದ್ಯೋಗ, ವಾಸ್ತವ್ಯ ಎಲ್ಲ ನಿಟ್ಟಿನಲ್ಲಿಯೂ 'ತಾಳಿಕೆ'ಯ ಗಡೀರೇಖೆ ಮೀರಿದ ದೋಚುವಿಕೆಯಿಂದ ಪ್ರಕೃತಿಯ ಒಡಲನ್ನು ಮಾಲಿನ್ಯದ ಕೂಪಕ್ಕೆ ತಳ್ಳುತ್ತಿದ್ದೇವೆ.

ಯುವ ಮನಸ್ಸುಗಳ ಅತ್ಯಾಕರ್ಷಣೀಯ ಕ್ಷೇತ್ರವಾಗಿರುವ ಫ್ಯಾಷನ್ ಕೂಡ ಈ ಅತಿರೇಕದಿಂದ ಹೊರತಾಗಿಲ್ಲ. ಜಗಮಗ ವೇದಿಕೆಗಳಲ್ಲಿ ಮಿಂಚುವ, ಪಾರ್ಟಿಗಳಲ್ಲಿ ಫಳಫಳ ಹೊಳೆಯುವ ವಸ್ತ್ರ ತೊಟ್ಟು ಮೆರೆಯುವ ವಸ್ತ್ರ ಮೆರವಣಿಗೆಯ ತಯಾರಿಕೆಯಲ್ಲಿ ಎಷ್ಟೋ ವಿಷಕಾರಿ ತ್ಯಾಜ್ಯಗಳು ನಿಸರ್ಗದ ಒಡಲಿನಲ್ಲಿ ಹುಣ್ಣು ಹುಟ್ಟಿಸಿರುತ್ತದೆ ಎಂದರೆ ನಂಬಲು ಕಷ್ಟ.

ಫ್ಯಾಷನ್ ಶೋ, ಸೆಲೆಬ್ರಿಟಿಗಳ ಮಾತು ಅತ್ತಲಿರಲಿ, ನಮ್ಮ ನಿಮ್ಮ ಜೀವನಶೈಲಿಯ ಕಡೆಗೇ ಒಮ್ಮೆ ದೃಷ್ಟಿನೆಡೋಣ. ನಮ್ಮ ಹಿಂದಿನ ಪೀಳಿಗೆಯವರಿಗೆ ಬಟ್ಟೆ ಖರೀದಿ ಎನ್ನುವುದು ಹಬ್ಬದ ಸಂದರ್ಭದಲ್ಲಿನ ಸಂಭ್ರಮ ಮಾತ್ರವಾಗಿತ್ತು. ವರ್ಷಕ್ಕೆ ಎರಡು ಮೂರು ಜೊತೆ ಬಟ್ಟೆ



